ಮಹಾಭಾರತದ ಉತ್ತರಕುಮಾರ ಗೊತ್ತಲ್ಲ, ಯುದ್ಧಮಾಡಿ ಆತಗೆ ಶತ್ರುವನ್ನು ಸಾಯಿಸಲಾಗಲಿಲ್ಲ... ಹಾಗಂತ ಸುಮ್ಮನೆ ಸೋಲುಪ್ಪಿಕೊಳ್ಳಲು ಸಿದ್ಧನಿಲ್ಲ. ಖಡ್ಗವನ್ನು ಹಿಡಿದ, ರಣರಂಗಕ್ಕೆ ಹೋದ. ವೈರಿಗಳ ಕೈ ಕಾಲು ಮುಂಡಗಳನ್ನು ಕೊಚ್ಚಿ ಕೊಚ್ಚಿ ಹಾಕಿದ. ಆತನಿಗಿಂತ ಮೊದಲೇ ಅದಾರೊ ಆ ವೈರಿಗಳ ರುಂಡವನ್ನು ಚೆಂಡಾಡಿರಬಹುದು. ರುಂಡ ಇಲ್ಲದಿದ್ದರೇನಂತೆ? ಸತ್ತದೇಹದ ಕೈ ಕಾಲುಗಳನ್ನು ಕತ್ತರಿಸಿದ್ದು ಅವನಂಥವನಿಗೆ ಸಾಹಸವೇ ಸರಿ. ತನ್ನ ಈ ಪರಾಕ್ರಮವನ್ನು ಅಂತಃಪುರದ ಅಂಗನೆಯರ ಮುಂದೆ ಅಟ್ಟಹಾಸದಿಂದ ಹೇಳಿಕೊಂಡು ಸಂಭ್ರಮಿಸಲಿಲ್ಲವೆ! ಅಷ್ಟಾದರೂ ಮಾಡಿದೆನಲ್ಲ ಎಂಬುದು ಉತ್ತರಕುಮಾರನ ಉಮೇದಿಗೆ ಕಾರಣವಾಯಿತು. ಇಷ್ಟು ಸಾಕಲ್ಲ ಆತನಿಗೆ, ಇಲ್ಲದ ಮೀಸೆಯ ಮೇಲೆ ಕೈಯಾಡಿಸಲು!

'ಅಂಜಿಕುಂತರೆ ಹೈನಾಗೊದಿಲ್ಲ, ಬಾಣಂತನಕ್ಕ ಮಕ್ಕಳಾಗೋದಿಲ್ಲ' ಅಂತ ಹೇಳ್ತಾರೆ. ಮಾನ ಮರ್ಯಾದೆ ಅಂತ ಕುಂತವರಿಗೆ ರಾಜಕೀಯದಲ್ಲಿ ಬೆಳೆಯೊಕ್ಕಾಗಲ್ಲ. ಮೂರೂ ಬಿಟ್ಟವನು ಊರಿಗೇ ದೊಡ್ಡೋನು, ಸುಳ್ಳಲ್ಲ. ಮಾನ ಮುಗ್ಗರಿಸಿದ್ದರೂ, ತಮ್ಮ ವರಮಾನ ತಗ್ಗಿಸಿಕೊಳ್ಳಲೊಪ್ಪದ ಲಂಚಣ್ಣರ ಕಾಲವಿದು.

'ನನ್ನ ಹಿಡ್ಕೊಂಡೇ ಹೇಳ್ತೀನಿ, ಎಲ್ರೂ ಲಂಚಬಡುಕರೆ!...' ಎಂದು ಮೊದಲಿಗೆ ತಮ್ಮನ್ನು ತಾವೇ ಅಗ್ಗಮಾಡಿಕೊಳ್ಳುತ್ತಾರೆ. ನಂತರ, ತಿನ್ನುವಿಕೆಯಲ್ಲಿ ತಮ್ಮನ್ನೂ ಮೀರಿಸಿದವರನ್ನು ಉದಾಹರಿಸುವುದು ಹೀಗೆ–

'ನೋಡಿ, ಆತನ ಮನೆಯ ಮೇಲೆ ಮೂರು ಸಲ ಲೋಕಾಯುಕ್ತರ ದಾಳಿಯಾಗಿದೆ... ಆದ್ರೆ, ನಮ್ಮನೆ ಮೇಲೆ ಕೇವಲ ಎರಡೇ ಎರಡು ಸಲ ಮಾತ್ರ...'

ತಾನು ಗಿಂಬಳ ತಿಂದರೂ, ತೀರ ಹಾಗಲ್ಲ, ಮರ್ಯಾದೆಯ ಲಿಮಿಟ್ಟು ಎಂದೂ ಬಿಟ್ಟಿಲ್ಲ... ಬಡವರನ್ನು ಕಂಡರೆ ಕರುಳು ಅಯ್ಯೋ ಅನ್ನುತ್ತದೆ... ಅಂಥವರಿಗೆ ಸಾಕಷ್ಟು ರಿಯಾಯ್ತಿ ತೋರಿಸುತ್ತಾನೆ; ದೇವರಿಗೆ, ಧರ್ಮಕಾರ್ಯಕ್ಕೆಂದು, ಪ್ರತಿಫಲದ ಇಂತಿಷ್ಟು ಪ್ರತಿಶತ ಕೊಡುತ್ತ ಬಂದಿರುವುದಾಗಿಯೂ ಸಮರ್ಥಿಸಿಕೊಳ್ಳುತ್ತಾನೆ.

ಹೀಗೆ, ತನಗಿಂತ ಕೆಳಗೆ ಬಿದ್ದವರೊಂದಿಗೆ ಹೋಲಿಸಿಕೊಂಡು, ಕಳ್ಳ ಸಮಾಧಾನ ಪಡೆಯುವವನ ಮೀಸೆ ಎಂದಿಗೂ ಮಣ್ಣಾಗದು! ಇದ್ದರೆ ತಾನೆ ಅದು ಮಣ್ಣಾಗೊ ಭಯ! ಅದನ್ನೇ ಇಲ್ಲವಾಗಿಸಿದರಾಯ್ತು, ಅಂದಕೊಂಡರೊ ಏನೊ!... ಹೀಗಾಗಿ ಬಹಳಷ್ಟು ಜನನಾಯಕರು / ಅಧಿಕಾರಿಗಳು ಆ ಮೀಸೆಯ ಮೇಲಿನ ಆಸೆಯನ್ನೇ ತೊರೆದಿದ್ದಾರೆ. ಅಂದಿನವರ ಕಲ್ಲೀ ಮೀಸೆ, ಗಿರಿಜಾ ಮೀಸೆ, ಏರು ಮೀಸೆ, ಜೋರು ಮೀಸೆ, ತಳವಾರ ಮೀಸೆವಂತರು ಈಗಿಲ್ಲ. ಹೋಗ್ಲಿ ಅಂತಂದ್ರೆ, ಜೊಂಡುಗ ಮೀಸೆವಂತರೂ ಇಲ್ಲವಲ್ರಿ! ಎಲ್ಲೆಲ್ಲೂ ಈಗ ಮೀಸೆರಹಿತ ಮುಖ(ಮಿಕ)ಗಳು!

ಕೆಲವರು ಇರ್ತಾರೆ. ಸರ್ವ ದುಶ್ಚಟಗಳ ಸಂಗಮವಾಗಿರೋರು. 'ನಾನು ಕುಡೀತಿರಬಹುದು, ಜೂಜಾಡುತ್ತಿರಬಹುದು, ಆದರೆ ಏನೇ ಮಾಡಿದರೂ ನಾಲ್ಕು ಗೋಡೆ ಮಧ್ಯದೊಳಗ. ಕುಡಿದು, ಬೀದಿಯಲ್ಲಿ ಗಲಾಟೆ ಮಾಡಿ, ಅವನಂತೆ ಗಟಾರದೊಳಗ ಬೀಳೂದಿಲ್ಲಾ, ರಸ್ತಾದಾಗ ಉರುಳಾಡೋದಿಲ್ಲ. ನನಗ ಮರ್ಯಾದಿ ಮುಖ್ಯಾರಿ ಮರ್ಯಾದೀ! ಹಾಂ' ಎಂದು ಏಕದಂ ಮರ್ಯಾದಾ ಪುರುಷರಾಗುತ್ತಾರೆ...

ಇನ್ನು ಆರೋಗ್ಯ ಕೆಡಿಸಿಕೊಳ್ಳದ ಕುಡುಕರ ಬಗ್ಗೆ ಆಡುವ ಮೆಚ್ಚುಗೆಯ ಮಾತುಗಳನ್ನು ನೀವು ಕೇಳಬೇಕು. 'ಕುಡೀತಿದ್ದಾ, ಸಿಕ್ಕಾಪಟ್ಟೆ ಕುಡೀತಿದ್ದಾ, ಆ ಬಡ್ಡೀಮಗನ ಹೇಲ್ತ್ ಹ್ಯಾಂಗ್ ಗಟ್ಟಿಮುಟ್ಟಿತ್ತು ಅಂತೀರಿ!' ಎಂದೂ, ತೀರ್ಥಸೇವೆಗಾಗಿ ಸಾಲಸೋಲಮಾಡಿ ಸಂಪೂರ್ಣ ಸತ್ಯಾನಾಶವಾಗಿ ಹೋದವರೂ, ಮೂಟೆಗಟ್ಟಲೆ ಜೋಳ ಕಳ್ಕೊಂಡ್ರೂ, ಮುಷ್ಟಿಯಷ್ಟಾದ್ರೂ ಉಪ್ಪು ಉಳಿಸಿಕೊಂಡು,